<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಸಲಾಯಿತು.</u>
<u>ದಿನಾಂಕಃ **08/07/2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>
<u>ಮುಂದುವರೆದ ಪಾಟೀ ಸವಾಲುಃ **6**ನೇ ಪ್ರತಿವಾದಿ ಪರವಾಗಿ ಶ್ರೀ ಬಿ.ಕೆ.ಎಂ ವಕೀಲರಿಂದಃ</u>

1. ನನ್ನ ಅಜ್ಜ ಅಬ್ದುಲ್ ಅಜೀಜ್ ರವರ ಅಂತ್ಯಸಂಸ್ಕಾರ ಕಾರ್ಯಗಳನ್ನು ನನ್ನ ಮಾವಂದಿರು ಮಾಡಿರುತ್ತಾರೆ. ನನ್ನ ಅಜ್ಜ ಅಬ್ದುಲ್ ಅಜೀಜ್ ರವರು ತೀರಿಕೊಳ್ಳುವ ಮೊದಲು ಅನಾರೋಗ್ಯದಿಂದ ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಅಜ್ಜ ಅಬ್ದುಲ್ ಅಜೀಜ್ ರವರು ಸಾಲ ಮಾಡಿದ್ದರೋ ಇಲ್ಲವೋ ಗೊತ್ತಿಲ್ಲ. ನನ್ನ ಅಜ್ಜ ಅಬ್ದುಲ್ ಅಜೀಜ್ ರವರು ತೀರಿಕೊಂಡ ನಂತರ ಉತ್ತರಾಧಿಕಾರ ಪತ್ರವನ್ನು ಪಡೆಯಲಾಗಿದೆಯೋ ಇಲ್ಲವೋ ಗೊತ್ತಿಲ್ಲ. ನನ್ನ ಅಜ್ಜ ಅಬ್ದುಲ್ ಅಜೀಜ್ ರವರು ತೀರಿಕೊಂಡ ನಂತರ ಅವರ ಅಂತ್ಯಸಂಸ್ಕಾರದ ಖರ್ಚು, ಉತ್ತರಕ್ರಿಯಾಧಿ ಖರ್ಚು, ವಾರಸುದಾರ ಪ್ರಮಾಣ ಪತ್ರ ಪಡೆದಿದ್ದರೆ ಹಾಗೂ ಅವರ ಅನಾರೋಗ್ಯದ ಖರ್ಚುಗಳನ್ನು ಹಾಗೂ ಅವರ ಅನಾರೋಗ್ಯದ ನಿಮಿತ್ತ ಅವರನ್ನು ನೋಡಿಕೊಂಡಿದ್ದರೆ ಅಂತಹ ಖರ್ಚು ವೆಚ್ಚಗಳನ್ನು ಕಳೆದು ಅವರ ಆಸ್ತಿಯನ್ನು ನಂತರ ಹಿಸ್ಸೆ ಮಾಡಿಕೊಳ್ಳಬೇಕು ಎಂದರೆ ಆ ರೀತಿ ಏನು ಇಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿಯವರಿಗೆ ಇಬ್ಬರು ಅಣ್ಣಂದಿರು ಇರುತ್ತಾರೆ. ನನ್ನ ತಾಯಿಯ ಅಣ್ಣಂದಿರು ಬೇರೆ ಬೇರೆ ಇಲ್ಲ ಅವರು ಒಟ್ಟಾಗಿಯೇ ಇರುತ್ತಾರೆ. ಅವರು ವಿವಾಹ ಆಗುವವರೆಗೆ ಒಟ್ಟಾಗಿಯೇ ಇದ್ದರು. ನನ್ನ ತಾಯಿಯ ಮೊದಲನೇ ಅಣ್ಣನ ಹೆಸರು ನಜೀರ ಅಹಮ್ಮದ್ ಅವರು ಯಾವಾಗ ವಿವಾಹ ಆದರು ಎಂದು ಗೊತ್ತಿಲ್ಲ. ನನ್ನ ತಾಯಿಯ 2ನೇ ಅಣ್ಣ ಫಜಲ್-ಉರ್-ರೆಹಮಾನ್ ಯಾವಾಗ ವಿವಾಹ ಆದರು ಎಂದು ಗೊತ್ತಿಲ್ಲ. ನನ್ನ ತಾಯಿಯ ತಮ್ಮಂದಿರಾದ ಮಹಮ್ಮದ್ ಫಾಜಿಲ್ ರವರ ವಿವಾಹ ಆಗಿ 35 ವರ್ಷ ಆಗಿರುತ್ತದೆ, ಮತ್ತೊಬ್ಬ ಸಹೋದರ ಅಬ್ದುಲ್ ರಬ್ ರವರ ವಿವಾಹ ಆಗಿ 37-38 ವರ್ಷಗಳು ಆಗಿವೆ. ಮದುವೆಯಾದ ನಂತರವೂ ನನ್ನ ತಾಯಿಯ ಅಣ್ಣ ತಮ್ಮಂದಿರು ಜೊತೆಯಲ್ಲೇ ಇದ್ದರು. ನನ್ನ ತಾಯಿಯ ಅಣ್ಣ ತಮ್ಮಂದಿರು ಇಂದಿಗೂ ಒಟ್ಟಿಗೆ ಇದ್ದು ಜಮೀನಿನ ಸಾಗುವಳಿಯನ್ನು ಒಟ್ಟಾಗೆ ಮಾಡುತಿದ್ದಾರೆ. ದಾವಾ ಜಮೀನಿನ ಖಾತೆ ವರ್ಗಾವಣೆ ನನ್ನ

ತಾಯಿಯ ಅಣ್ಣ ತಮ್ಮಂದಿರ ಹೆಸರಿಗೆ ಯಾವಾಗ ವರ್ಗಾವಣೆಯಾಗಿರುತ್ತದೆ ಎಂದು ಗೊತ್ತಿಲ್ಲ. ದಾವಾ ಸ್ವತ್ತಿನ ಖಾತೆಯು ಇಂದಿಗೂ ಸಹ ನನ್ನ ಅಜ್ಜನ ಹೆಸರಿನಲ್ಲಿ ಇರುತ್ತದೆ. ನಿಪಿ-4 ರ ಪಹಣಿ ಪತ್ರಿಕೆ 4ನೇ ಪ್ರತಿವಾದಿ ಮಹಮದ್-ಫಾಜಿಲ್ ರವರ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-4 ರ ಪಹಣಿ ಪತ್ರಿಕೆ ಸುಳ್ಳು ದಾಖಲಾತಿ ಆಗಿರುತ್ತದೆ. ನಿಪಿ-5 ರ ಪಹಣಿ ಪತ್ರಿಕೆ 3ನೇ ಪ್ರತಿವಾದಿ ಫಜಲ್-ಉರ್-ರೆಹಮಾನ್ ರವರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-5 ರ ಪಹಣಿ ಪತ್ರಿಕೆಯೂ ಸಹ ಸುಳ್ಳು ದಾಖಲಾತಿ. ನಿಪಿ-6 ರ ಪಹಣಿ ಪತ್ರಿಕೆ 2ನೇ ಪ್ರತಿವಾದಿ ನಜೀರ್-ಅಹಮದ್ ರವರ ಹೆಸರಿನಲ್ಲಿ ಇದು ಆ ದಾಖಲಾತಿಯೂ ಸಹ ಸುಳ್ಳು ದಾಖಲಾತಿ ಎಂದು ನುಡಿಯುತ್ತಾರೆ. ನಿಪಿ-7 ರ ಪಹಣಿ ಪತ್ರಿಕೆ 7ನೇ ಪ್ರತಿವಾದಿ ಅಬ್ದುಲ್ ರಬ್ ರವರ ಹೆಸರಿನಲ್ಲಿದ್ದು ಆ ಪಹಣಿ ಪತ್ರಿಕೆಯೂ ಸಹ ಸುಳ್ಳು ದಾಖಲಾತಿ ಎಂದು ನುಡಿಯುತ್ತಾರೆ. ನಿಪಿ-9 ರ ಪಹಣಿ ಪತ್ರಿಕೆ 6ನೇ ಪ್ರತಿವಾದಿ ಎಸ್.ಕೆ.ಕೃಷ್ಣ ರವರ ಹೆಸರಿನಲ್ಲಿದ್ದು ಆ ಪಹಣಿ ಪತ್ರಿಕೆಯೂ ಸಹ ಸುಳ್ಳು ದಾಖಲಾತಿ ಎಂದು ನುಡಿಯುತ್ತಾರೆ.

2. ನಿಪಿ-4, 6 ಮತ್ತು 7 ರ ಪಹಣಿ ಪತ್ರಿಕೆಗಳ ಕಾಲಂ ನಂ.10 ರಲ್ಲಿ M.R.No.67/1996-97 ರಂತೆ ಖಾತೆ ವರ್ಗಾವಣೆಯಾಗಿದೆ ಎಂದರೆ ಸರಿ. ಸದರಿ M.R.No.67/1996-97 ರಂತೆ 2 ರಿಂದ 5ನೇ ಪ್ರತಿವಾದಿಯವರ ಹೆಸರಿನಲ್ಲಿ ಖಾತಾ ವರ್ಗಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ.111 ರ ಜೊತೆಗೆ ಸರ್ವೇ ನಂ.112 ನ್ನು ಸೇರಿಸಿಕೊಂಡು 1996-97 ನೇ ಸಾಲಿನಲ್ಲಿ ಖಾತಾ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂಬ ವಿಷಯ ನನ್ನ ತಾಯಿಗೆ ಗೊತ್ತು ಎಂದರೆ ಸರಿಯಲ್ಲ. ನನ್ನ ತಾಯಿಯ ತಮ್ಮಂದಿರು 1996-97 ರ ಸಾಲಿನಲ್ಲೇ ಹಿಸ್ಸೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

3. ನನ್ನ ಅಜ್ಜನಿಗೆ ಸೇರಿದ ಸರ್ವೇ ನಂ.112 ರ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿದ್ದೇನೋ ಇಲ್ಲವೋ ಗೊತ್ತಿಲ್ಲ. ಐಟಂ ನಂ.1 ರ ಸ್ವತ್ತುಗಳ ಚೆಕ್ಕುಬಂದಿ ಪ್ರತಿ ಸರ್ವೇ ನಂಬರಿಗೂ ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ಆದರೆ ಚೆಕ್ಕುಬಂದಿ ಒಂದೇ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.1 ರ ಚೆಕ್ಕುಬಂದಿ ಪೂರ್ವಕ್ಕೆ ಕುಂಬಾರರ ಸಹಕಾರ ಸಂಘ, ಪಶ್ಚಿಮಕ್ಕೆ ಕುಶಾಲನಗರ ರಸ್ತೆ, ದಕ್ಷಿಣಕ್ಕೆ ಖಾಸಗಿಯವರ ಜಮೀನು, ಉತ್ತರಕ್ಕೆ ಸಂತೆ ಮತ್ತು ಮಡಿಕೇರಿಗೆ ಹೋಗುವ ರಸ್ತೆ. ನಾನು ಐಟಂ ನಂ.1 ಕ್ಕೆ ನೀಡಿರುವ ಚೆಕ್ಕುಬಂದಿ ಸುಳ್ಳು ಎಂದರೆ ಸರಿಯಲ್ಲ.

4. 6ನೇ ಪ್ರತಿವಾದಿ ಎಸ್.ಕೆ.ಕೃಷ್ಣ ರವರನ್ನು ಯಾವ ಕಾರಣಕ್ಕಾಗಿ ಈ ದಾವೆಯಲ್ಲಿ ಸೇರಿಸಲಾಗಿದೆ ಎಂದರೆ ಸಾಕ್ಷಿದಾರರು 6ನೇ ಪ್ರತಿವಾದಿ ನಮ್ಮ ಜಾಗದ ಸ್ವಾಧೀನದಲ್ಲಿ ಇದ್ದಾರೆ ಆ ಕಾರಣಕ್ಕಾಗಿ ಅವರನ್ನು ಸೇರಿಸಲಾಗಿದೆ ಎಂದು ನುಡಿಯುತ್ತಾರೆ. ಆ ರೀತಿ ಅವರು ಎಷ್ಟು ವರ್ಷಗಳಿಂದ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರು 3 ಗುಂಟೆ ಜಾಗದಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಸದರಿ 3 ಗುಂಟೆ ಜಾಗದ ಚೆಕ್ಕುಬಂದಿ ಎಂದರೆ ಪೂರ್ವಕ್ಕೆ ಪಶ್ಚಿಮ, ಉತ್ತರ, ದಕ್ಷಿಣಕ್ಕೆ ಏನು ಏನಿದೆ ಎಂದು ಗೊತ್ತಿಲ್ಲ. ಈ ದಾವೆಯಲ್ಲಿ ಏನೇನು ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಿ ಎಂಬ ಪ್ರಶ್ನೆಗೆ ಜಾಗಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ನೀಡಿರುತ್ತೇನೆ ಹಾಗೂ ನ್ಯಾಯಾಲಯ ಕೇಳಿದ ದಾಖಲಾತಿಗಳನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. M.R.No.67/1996-97 ರ ಮುಟೇಷನ್ ರಿಜಿಸ್ಟರ್ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು